**ಸಾಕ್ಷಿಯನ್ನು ದಿಃ 24.03.2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ**

ನನಗೆ ಒಬ್ಬ ಮಗ ಮತ್ತು ಒಬ್ಬ ಮಗಳು. ಅವರು ಏನು ಕೆಲಸ ಮಾಡುತ್ತಾರೆ ಎಂದು ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅವನು ಕೆಲಸ ಮಾಡಿ ರೂ. 25,000/- ತಿಂಗಳಿಗೆ ತಂದು ಕೊಡುತ್ತಿದ್ದ. ಪರಿಹಾರಕ್ಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವನಿಗೆ ತೀರಿಕೊಂಡಾಗ 25 ವರ್ಷ ವಯಸ್ಸಾಗಿತ್ತು. ದಾಖಲೆಗಳ ಪ್ರಕಾರ 1997 ರಲ್ಲಿ ಹುಟ್ಟಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗ ಯಾರ ಬೈಕ್ ನಲ್ಲಿ ಹೋಗುತ್ತಿದ್ದ ಎಂದು ಗೊತ್ತಿಲ್ಲ. ನನ್ನ ಮಗನಿಗೆ ಚಾಲನ ಪರವಾನಗಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗನಿಗೆ ಚಾಲನ ಪರವಾನಗಿ ಇಲ್ಲ ಎಂದು ಅಂತಿಮ ವರದಿಯಲ್ಲಿ ಬರೆದಿರುವುದನ್ನು ಓದಿ ತಿಳಿದುಕೊಂಡಿಲ್ಲ. ಹಾಜರು ಪಡಿಸಿದ ದಾಖಲೆಗಳನ್ನು ಓದಿಸಿ ತಿಳಿದುಕೂಂಡಿದ್ದೇನೆ. ಅವುಗಳಲ್ಲಿ ನನ್ನ ಮಗನಿಗೆ ಡಿ.ಎಲ್ ಇರಲಿಲ್ಲ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ಡಿ.ಎಲ್ ಅನ್ನು ಹಾಜರು ಪಡಿಸಬಹುದಾ ಎಂದರೆ ಆಗುವುದಿಲ್ಲ ಎನ್ನುತ್ತಾರೆ. ನನ್ನ ಮಗನಿಗೆ ಡಿ.ಎಲ್ ಇರಲಿಲ್ಲ ಎಂದರೆ ಸರಿಯಲ್ಲ.

2. ಪೋಲೀಸರಿಗೆ ನಾನೇ ದೂರನ್ನು ನೀಡಿದ್ದೇನೆ. ಅಪಘಾತ ಸ್ಥಳದಲ್ಲಿ ನಾನು ಇರಲಿಲ್ಲ ನನಗೆ ಯಾರೋ ಕರೆ ಮಾಡಿ ಹೇಳಿದ್ದಾರೆ. ಅಪಘಾತವನ್ನು ನಾನು ಕಣ್ಣಾರೆ ಕಂಡಿರುವುದಿಲ್ಲ. ನಾನು ಹೋದ ಮೇಲೆ ಸ್ಥಳಕ್ಕೆಶ್ರೀನಿವಾಸ ನಾಯಕ ಬಂದಿದ್ದಾರೆ. ಅಪಘಾತ ಸ್ಥಳವನ್ನು ನಾನು ನೋಡಿಲ್ಲ. ಅಪಘಾತ ಸ್ಥಳದಿಂದ ನಮ್ಮೂರಿಗೆ 7-8 ಕಿ.ಮೀ ಇದೆ. ಕಡಕೊಳ ದಿಂದ ಎರಡು ಕಿ.ಮೀ ಮುಂದಕ್ಕೆ ಅಪಘಾತ ಆಗಿದೆ. ಅಪಘಾತ ಸ್ಥಳದ ನಕ್ಷೆಯನ್ನು ನಾನು ನೋಡಿಲ್ಲ. ಅದು ಸರಿ ಇದೆಯಾ ಎಂದರೆ ನನಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ. ಅಪಘಾತ ಸ್ಥಳದ ಎರಡು ಕಡೆ ಕಾಂಕ್ರಿಟ್ ಗೋಡೆ ಇದೆ ಎಂದು ಕಾಣಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ಸದರಿ ಕಾಂಕ್ರಿಟ್ ಗೋಡೆ ಸ್ಥಳದಲ್ಲಿ ಇದೆ ಎಂದರೆ ಸರಿ. ನನ್ನ ಮಗ ಕಡಕೊಳದಿಂದ ಚಿನ್ನಂಬಳ್ಳಿ ಕಡೆ ಹೋಗುತ್ತಿದ್ದ. ಬಸ್ಸು ಎಲ್ಲಿಂದ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಮಗನೇ ಹೋಗಿ ಬಸ್ಸಿಗೆ ಡಿಕ್ಕಿ ಪಡಿಸಿರುತ್ತಾನೆ

ಎಂದರೆ ಸರಿಯಲ್ಲ. ನನ್ನ ಮಗನಿಗೆ ಮದುವೆಯಾಗಿರಲಿಲ್ಲ. ಆ ದಿನ ನನ್ನ ಮಗ ಮಧ್ಯಪಾನ ಮಾಡಿ ಬೈಕ್ ಚಲಾಯಿಸಿ ಅಪಘಾತ ಪಡಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಮಗ ಚಲಾಯಿಸುತ್ತಿದ್ದ ಬೈಕ್ ಯಾರದ್ದು ಎಂದು ನನಗೆ ಗೊತ್ತಿಲ್ಲ. ಬೈಕ್ ಮಾಲೀಕರನ್ನು ಅರ್ಜಿಯಲ್ಲಿ ಸೇರಿಸಲು ತೊಂದರೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪರಿಹಾರಕ್ಕಾಗಿ ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

3. ಪೋಲೀಸರು ನನ್ನ ಸಹಿಯನ್ನು ಠಾಣೆಯಲ್ಲಿ ಪಡೆದಿದ್ದಾರೆ ಎಂದರೆ ಸರಿ. ಅದರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮಗನ ತಪ್ಪಿದ್ದರೂ ಪರಿಹಾರಕ್ಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.